



(6ನೇ ಪುಟದಿಂದ)

ಇದು ದನ ಮೇವುಗಳಿಗೆ ಮೃಷ್ಟಾನ್ನ! ಆದರೆ ಹುಲು ಮಾನವರಿಗೆ ಕಿರಿಕಿರಿ. ಅದೇ ನಮ್ಮ ನಿಮ್ಮ ನಡುವೆ ವಿರಾಜಮಾನ ಸ್ಥಿತಿಯಲ್ಲಿ ನಿಂತಿರುವ ಹುಲ್ಲು ಕಳೆಗಳು. ಎಲ್ಲೆಂದರಲ್ಲಿ ತಮ್ಮದೇ ಸಾಮ್ರಾಜ್ಯ ಹೂಡಿಕೊಂಡಿರುವ ಅವುಗಳ ಮೇಲೆ ಯಾವುದೇ ರೀತಿಯಲ್ಲಿ ದಂಡೆತ್ತಿ ಹೋಗಿ ನಿವಾರಣಾತ್ಮಕ ಕ್ರಮ ಜರುಗಿಸಿ; ಅದು ನಮ್ಮ ತಾತ್ಕಾಲಿಕ ಪರಿಶ್ರಮದ ನಿಟ್ಟುಸಿರಷ್ಟೇ. ಪುನಃ ಅವು ಧುತ್ತನೆ ಚಿಗುರಿ ಗಹಗಹಿಸಿ ನಗತೊಡಗಿದಾಗಲೇ ಮತ್ತೊಮ್ಮೆ ಯಂತ್ರ–ತಂತ್ರಗಳಿಂದ ಸಮರೋಪಾದಿ ಯುದ್ಧ ಕೈಗೊಳ್ಳುತ್ತೇವೆ. ಏಕೆಂದರೆ ಮನೆ ಆಸು–ಪಾಸು, ತೋಟ ಜಮೀನುಗಳನ್ನು ಚೊಕ್ಕಟವಾಗಿ ಇರಿಸಿಕೊಂಡ ನೆಮ್ಮದಿ. ಏನೋ ನಿರಾಳ ಭಾವ. ನಿಜವಾಗಲೂ ಅಲ್ಲಿಯೇ ಇರುವುದು ಸತ್ಯವೊಂದರ ನಾಶ. ಬರಿ ಕಣ್ಣಿಗೆ ಕಾಣಿಸದ ಹುಲ್ಲು ಕಳೆಗಳಲ್ಲಿನ ಅದ್ಭುತ ಸೊಬಗು ಕಂಡವರಿಗಷ್ಟೇ ಗೊತ್ತು.

ಇದು ಕಣ್ಣು ತೆರೆದರೆ ಉಂಟು ಎನ್ನುವಂತಹ ಸತ್ಯದ ಅನ್ವೇಷಣೆ. ಹುಲ್ಲು ಕಳೆಗಳ ಸುಂದರ ಪರಿಚಯಾತ್ಮಕ ಗೋಚರ. ಅಲ್ಲಿನ ಅದ್ಭುತವೆಂಬಂತೆ ವೈಚಿತ್ರ ಮನ ಸೂರೆಗೊಳ್ಳುವುದು ಖಚಿತ. ಇದು ಭೂರಮೆಯ ಹುಸಿನಗುವ ಚಿತ್ತಾರದಲ್ಲಿ ಭ್ರಮೆಯ ಹೂ ಮುಡಿಸುವ ಹುನ್ನಾರವೇ ಎಂದು ಅನ್ನಿಸದಿರದು. ಅಷ್ಟು ಪ್ರಭಾವ ಬೀರುತ್ತವೆ ಕ್ಯಾಮರಾ ದೃಶ್ಯ ಸೆರೆ.

ಗಿಲಗೆಜ್ಜೆ ಸಹಿತವಾದ ಕೈಕಡಗ, ಕತ್ತಿನ ಹಾರ, ಸೊಂಟದ ಪಟ್ಟಿ ಯಾವುದೂ ಆಗಬಹುದಾದ ಈ ಮರುಳು ಆಕೃತಿಗೆ ಏನಂತೀರಾ? ಆಹಾ...! ಕೋಳಿ ಅಂಕಗಳ ಕತ್ತಿನ ನಿಮಿರು ನೋಡಿ, ಮತ್ತೆ ಹೂಸಿಂಗಾರದ ಒಡನಾಡಿ ಜಿರಾಫೆ, ಅಬ್ಬಾ... ಭರ್ಜರಿ ಕಂಬಳಿ ಹುಳು. ಉದ್ದನೆಯ ಕೆನ್ನಾಲಿಗೆ ಚಾಚಿದ ಅದೆಂಥದೋ ವಿಸ್ಮಯದ ಕೀಟ. ರೆಕ್ಕೆ ಬಿಚ್ಚಿ ಹಾರಲು ಸಜ್ಜಾಗಿವೆಯೋ ಎಂಬಂತಹ ಬಾನಾಡಿಗಳು. ಇಂತಹವೇ ಹಲವಾರು ಸಹಸ್ರಾರು ಬಗೆಯ ಮರುಳಯ್ಯರ ಪಾತ್ರಕ್ಕೆ ಅಲ್ಲಿ ಕಮ್ಮಿಯೇ ಇಲ್ಲ.

‘ಎಲೆಲೆ ಎಲ್ವೈ ಹುಲ್ಲು ಕಳೆಗಳೇ, ನಿಮ್ಮ ನೋವಿನ ಮಡುವಲ್ಲಿ ಏನೆಲ್ಲ ನಲಿವಿನ ಸಂಭ್ರಮವಿದೆ! ನೀವು ತಳೆದಿರುವ ರೂಪ ಅಮೋಘತೆಗೆ ನಮ್ಮದಿಷ್ಟು ಹ್ಯಾಟ್ಸಾಫ್’ ಎನ್ನಲೇಬೇಕು. ಅಂತೆಯೇ ಹುಲ್ಲು ಕಳೆಗಳ ಜೀವ ಪ್ರಪಂಚದ ಸೃಷ್ಟಿಗೆ ನಮ್ಮದಿಷ್ಟು ಕಂಡರಿಯದ ದೃಷ್ಟಿಯೂ ಖಂಡಿತ ಬೇಕು. ಕ್ಯಾಮೆರಾ ಕಣ್ಣಿನ ಜತೆಗೆ ಸೌಂದರ್ಯವನ್ನು ಗ್ರಹಿಸುವ ಒಳಗಣ್ಣೂ ಇರಬೇಕು.